ದಿನಾಂಕಃ-16-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಡಿ.ಆಯ್.ಕೆ ವಕೀಲರಿಂದ ಪ್ರತಿವಾದಿ ಪರವಾಗಿ**

ಸಾಕ್ಷಿಗೆ ಕನ್ನಡ ಮತ್ತು ಆಂಗ್ಲ ಭಾಷೆ ಬರುವುದಿಲ್ಲ. ಕಾರಣ ಶ್ರೀ.ಡಿ.ಟಿ.ಬಿ ವಕೀಲರನ್ನು ಅನುವಾದಕರನ್ನಾಗಿ ನೇಮಿಸಲಾಯಿತು. ಅನುವಾದಕರಿಗೂ ಪ್ರಮಾಣ ವಚನ ಭೋದಿಸಲಾಯಿತು.

ನಾನು ಡಿಪ್ಲೋಮಾ ಸಿವಿಲ್ ಇಂಜನಿಯರಿಂಗ ಪದವಿ ಹೊಂದಿದ್ದೇನೆ. ನಾನು ಖಾಯಂ

ಆಗಿ ನಾಸಿಕದಲ್ಲಿ ವಾಸವಿದ್ದೇವೆ. ನಾನು ಮತ್ತು ನಮ್ಮ ತಂದೆ ಕೂಡಿ ನಾಸಿಕದಲ್ಲಿ ಇದ್ದೇವೆ. ನಮ್ಮ ತಂದೆಗೆ ನಾವು 4 ಜನ ಗಂಡು ಮಕ್ಕಳು, ಹಿರಿಯರು ಇಬ್ಬರು ಪ್ರತ್ಯೇಕವಾಗಿ ವಾಸವಿದ್ದಾರೆ, ನಾನು ಮತ್ತು ನನ್ನ ಅಣ್ಣ ಅಂದರೆ 3 ನೇ ಮಗ ಒಟ್ಟಿಗೆ ಇದ್ದೇವೆ. ನಾನು ರಿಯಲ್ ಎಸ್ಟೇಟ್ ಅಂದರೆ ಲ್ಯಾಂಡ್ ಡೆವೆಲಪ್ ವೃತ್ತಿಯನ್ನು ನಡೆಸಿಕೊಂಡು ಇದ್ದೇನೆ. ನಾನು ಮತ್ತು ನಮ್ಮ ತಂದೆಯೇ ಕೂಡಿಯೇ ದಾವಾ ಹಾಕುವ ಬಗ್ಗೆ ಮಾಹಿತಿ ಕೊಟ್ಟಿದ್ದೇವೆ. ನಾವು ಜಮಖಂಡಿಗೆ ಬಂದು ವಕೀಲರಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ನಮ್ಮ ತಂದೆ ನನ್ನ ಹೆಸರಿಗೆ ಮೊಕ್ತಿಯಾರ ಪತ್ರ ಕೊಟ್ಟಿದ್ದು ಅದನ್ನು ಜಮಖಂಡಿಯಲ್ಲಿ ಬರೆದುಕೊಟ್ಟಿದ್ದಾರೆ. ಮೊಕ್ತಿಯಾರ ಪತ್ರದಲ್ಲಿ ಕೇವಲ ಪ್ರರಕಣ ನಡೆಸುವ ಬಗ್ಗೆ ಮಾತ್ರ ನಮೂದು ಇದೆ, ಮೊಕ್ತಿಯಾರ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ದಾವಾ ಯಾವ ಸ್ವರೂಪದು ಅಂತಾ ಗೊತ್ತಿದೆ. ಮೃತ್ಯುಪತ್ರ ನನ್ನನ್ನು ಭಧ್ದ ಪಡಿಸಿದ ಕಾರಣ ಅದನ್ನು ರದ್ದು ಪಡಿಸುವ ಕಾರಣ ಈ ದಾವಾ ಮಾಡಿದ್ದ ಇದೆ. ಮೃತ್ಯುಪತ್ರ ರದ್ದು ಮಾಡಲು ಈ ದಾವಾ ಮಾಡಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಗೆ ಸಂಬಂಧಿಸಿದಂತೆ ಘೋಷಣೆಗಾಗಿ ಈ ದಾವಾ ಮಾಡಿದ್ದೇನೆ. ನನಗೆ ಮನೆಯ ನಂಬರ ಗೊತ್ತಿಲ್ಲ. ಸದರಿ ಆಸ್ತಿ ಮೂಲತಃ ಮಾಣಿಕಚಂದ ಇವರ ಹೆಸರಿನಲ್ಲಿ ಇತ್ತು, ಮಾಣಿಕಚಂದ ನಂತರ ಶಾಂತಿಲಾಲರವರ ಹೆಸರಿನಲ್ಲಿ ಇತ್ತು, ಅವರ ನಂತರ ಅವರ ಹೆಂಡತಿ ಶಾಂತಾ ಇವರ ಹೆಸರಿಗೆ ಬಂದಿತ್ತು.

2. ಮಾಣಿಕಚಂದರವರಿಗೆ 4 ಜನ ಗಂಡು ಮಕ್ಕಳು ಮತ್ತು 3 ಹೆಣ್ಣುಮಕ್ಕಳು ಅವರೆಂದರೆ ರೂಪಚಂದ, ಶಾಂತಿಲಾಲ, ಬಾಲಚಂದ್ರ ಇನ್ನೊಬ್ಬರ ಹೆಸರು ಗೊತ್ತಿಲ್ಲ. ಹಿರಿಯವರ ಹೆಸರು ನನಗೆ ಗೊತ್ತಿಲ್ಲ. ಸದರಿಯವರು ನಾನು ಜನಿಸುವ ಪೂರ್ವದಲ್ಲಿ ಮೃತರಾಗಿದ್ದಾರೆ, 5 ಜನ ಹೆಣ್ಣುಮಕ್ಕಳು ಅವರೆಂದರೆ ಕುಸುಂಬೇನ, ಸೀತಾಬೇನ, ಪಾಮಾಬೇನ ಇನ್ನೂ ಉಳಿದ ಇಬ್ಬರ ಹೆಸರು ಗೊತ್ತಿಲ್ಲ. ಶಾಂತಿಲಾಲ ಇವರಿಗೆ ಒಬ್ಬ ಮಗನಿದ್ದು ಅವನ ಹೆಸರು ಮುರುಗೇಶ. ರೂಪಚಂದ ಇವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ದಿವಾಕರ ಅಂತಾ ಮಗ. ಹೆಣ್ಣುಮಕ್ಕಳ ಹೆಸರು ಗೊತ್ತಿಲ್ಲ. ಸದರಿ 5 ಜನ ಹೆಣ್ಣುಮಕ್ಕಳ ಪೈಕಿ ಕುಸಮ್‌ಬೇನ ಮಾತ್ರ

ಜೀವಂತ ಇದ್ದಾರೆ. ಸಾಕ್ಷಿಯು ಮುಂದುವರೆದು ಈ ಆಸ್ತಿಯಲ್ಲಿ ಅರ್ಧ ಭಾಗ ಅವರ ಹೆಸರಿನಲ್ಲಿ ಇದೆ ಅಂತಾ ಹೇಳುತ್ತಾರೆ. ಮಾಣಿಕಚಂದ ಅವರ ಮಕ್ಕಳ ನಡುವೆ ಮಾಣಿಕಚಂದ ಜೀವಂತ ಇರುವಾಗಲೇ ತಮ್ಮ ಮಕ್ಕಳಿಗೆ ವಾಟ್ನಿ ಮಾಡಿಕೊಟ್ಟಿದ್ದರು. ವಾಟ್ನಿ ಆದ ಬಗ್ಗೆ ಮುದಾಂಕ ಶುಲ್ಕ ಇರುವ ಹಾಳೆಗಳ ಮೇಲೆ ಬರೆಯಲಾಗಿದೆ. ನಮ್ಮ ತಂದೆಯ ಬಳಿ ಅದರ ಪ್ರತಿ ಇದೆಯಾ ಇಲ್ಲವಾ ಅಂತಾ ನೋಡಿ ಹೇಳಬೇಕು. ಅದು ಇದ್ದರೆ ಅದನ್ನು ಹಾಜರಪಡಿಸುವುದಾಗಿ ಸಾಕ್ಷಿ ಹೇಳುತ್ತಾರೆ. ಸುಮಾರು 55 ವರ್ಷಗಳ ಹಿಂದೆಯೇ ಜಮಖಂಡಿಯನ್ನು ಬಿಟ್ಟಿದ್ದೇವೆ. ಶಾಂತಾಬಾಯಿ ಮತ್ತು ಶಾಂತಾಲಾಲ ಇವರ ಲಗ್ನ ಯಾವಾಗ ಆಯಿತು ಗೊತ್ತಿಲ್ಲ. ಅವರ ಲಗ್ನವಾಗಿ 50 ವರ್ಷ ಆಗಿರಬಹುದು ಎಂದರೆ ಇರಬಹುದು. ರೂಪಚಂದ ಅವರ ಮಕ್ಕಳನ್ನಾಗಲೀ, ಸಹೋದರರನ್ನಾಗಲೀ ವಾಜ್ಯ ಕಾರಣ ಇಲ್ಲದಿರುವ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

3. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಇದ್ದು ನನ್ನ ಕಬ್ಜೆಯಲ್ಲಿ ಇದೆ. ದಾವಾ ಸ್ವತ್ತು ನಮ್ಮ ಹೆಸರಿನಲ್ಲಿ ಇದ್ದು, ನಮ್ಮ ಕಬ್ಜಾದಲ್ಲಿ ಇದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿದ್ದೇವೆ ಎಂದರೆ ಸರಿ. ಆ ರೀತಿ ಬರೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರಿ ಕಾಗದ ಪತ್ರಗಳಲ್ಲಿ ನಮ್ಮ ಹೆಸರು ಇರುವ ಕಾರಣ ವಾದ ಪತ್ರದಲ್ಲಿ ನನ್ನ ಕಬ್ಜಾ ಮತ್ತು ಹೆಸರು ಇದೆ ಅಂತಾ ನಮೂದು ಮಾಡಿಸಿದ್ದೇನೆ. ದಾವಾ ಹಾಕಿದ ನಂತರ ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿಯು ಅದರ ಪ್ರಕ್ರಿಯೆ ಮುಂಚೆಯೇ ನಡೆದಿತ್ತು ದಾವಾ ಹಾಕಿದ ನಂತರ ಅದು ಎಂಟ್ರಿ ಆಗಿದೆ. ಪ್ರಕ್ರಿಯೇ ಯಾವಾಗ ಪ್ರಾರಂಭವಾಯಿತು ಅಂತಾ ನನಗೆ ದಿನಾಂಕ ನೆನಪಿಲ್ಲ. ಆದರೆ ಈ ಕೇಸಿನಲ್ಲಿ ಕಾಗದ ಪತ್ರಗಳನ್ನು ಹಾಜರಪಡಿಸಿದ್ದೇನೆ. ತಲಾಠಿಗೆ ವರದಿ ಕೊಡುವುದರಿಂದ ಪ್ರಕ್ರಿಯೇ ಪ್ರಾರಂಭವಾಗಿತ್ತು, ಅದಕ್ಕೆ ಸಂಬಂಧಿಸಿದ ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ. ಶಾಂತಾಬಾಯಿ ಇವರು ಮೇ 2012 ರಲ್ಲಿ ಇಸ್ಲಾಂಪೂರದಲ್ಲಿ ಮೃತರಾಗಿದ್ದರು. ವಾದ ಪತ್ರದಲ್ಲಿ 3 ನೇ ಪ್ಯಾರಾದಲ್ಲಿ ನಮೂದಿಸಿದ ಎಲ್ಲಾ ಅಂಶಗಳು ಒಪ್ಪಿದ ವಿಷಯಗಳು ಅಲ್ಲ. ಆದರೆ ವಿಷಯಗಳಿಗೆ ವಿಸ್ತೃತವಾಗಿ ನಮೂದಿಸಲಾಗಿದೆ.

4. ಸದರಿ ಮೃತ್ಯುಪತ್ರದಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯನ್ನು ಜಂಟಿಯಾಗಿ ದತ್ತಿ ನ್ಯಾಸಮಂಡಳಿಯ ಸದಸ್ಯರು ಅಂತಾ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಶಾಂತಾಬಾಯಿಯವರ ಮರಣಾನಂತರ ಮೃತ್ಯುಪತ್ರದ ಆಧಾರದಲ್ಲಿ ಏನು ಮಾಡಿದ್ದೀರಾ ಎಂದರೆ ಮೃತ್ಯುಪತ್ರ ಖೊಟ್ಟಿ ಇತ್ತು ಅದಕ್ಕೆ ಅದರ ಪ್ರಕಾರ ನಡೆದುಕೊಂಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಶಾಂತಾಬಾಯಿರವರು ಯಾವುದೇ ಮೃತ್ಯುಪತ್ರ ಮಾಡಿಲ್ಲ ಅಂತಾ ಹೇಳುತ್ತಾರೆ. ದಿಃ14.05.2012 ರಂದು ನಮ್ಮ ತಂದೆ 1 ನೇ ವಾದಿ ಕಾರ್ಪೋರೇಶನ ಬ್ಯಾಂಕಿಗೆ ಪ್ರೊಬೇಟ ತೆಗೆದುಕೊಂಡು ಬರುವುದಾಗಿ ಹೇಳಿ ಅಲ್ಲಿಯವರೆಗೆ ಅಕೌಂಟ ಯಾರಿಗೂ ಚಾಲನೆ ಮಾಡದಂತೆ ನಿರ್ಬಂದಿಸಿದ್ದರು ಎಂದರೆ ಸರಿ. ಅದೇ ಶ್ರೀ.ಎಸ್.ಜಿ.ಕುಲಕರ್ಣಿ, ಮುಖಾಂತರ ಒಂದು ತಿಳುವಳಿಕೆಯನ್ನು ಸಹಾ ಕಾರ್ಪೂರೇಶನ ಬ್ಯಾಂಕಿಗೆ ಕಳುಹಿಸಲಾಗಿತ್ತು ಎಂದರೆ ಸರಿಯಲ್ಲ. ಮೊಕ್ತಿಯಾರ ಪತ್ರದಲ್ಲಿ ದಿಃ15.12.2011 ರ ಮೃತ್ಯುಪತ್ರದ ಉಲ್ಲೇಖ ಇದೆ ಎಂದರೆ ಸರಿ, ಸಾಕ್ಷಿಯು ಮೃತ್ಯುಪತ್ರ ಪೋಸ್ಟ ಮೂಲಕ ಬಂದ ಕಾರಣ ನಮೂದಿಸಲಾಗಿದೆ ಎಂದು ಹೇಳುತ್ತಾರೆ. ಸದರಿ ಮೃತ್ಯುಪತ್ರದ ಪ್ರತಿಯನ್ನು ನಾನು ಸಹ ನೋಡಿದ್ದೇನೆ. ಈಗ ಶಿರಸ್ತೆದಾರರ ಕಬ್ಜೆಯಲ್ಲಿ ಇದ್ದ ಲಕೋಟೆಯಲ್ಲಿ ತೆರೆದ ನ್ಯಾಯಾಲಯಕ್ಕೆ ತರಿಸಿದ್ದು, ತೆರೆದ ನ್ಯಾಯಾಲಯದಲ್ಲಿ ಅದನ್ನು ಒಡೆದು ಅದನ್ನು ಸಾಕ್ಷಿಗೆ ಕೊಡಲಾಯಿತು. ಒಂದು ಖಾಲಿ ಲಕೋಟೆ ಇದ್ದು, ಅದರ ಮೇಲೆ ಡಾಕ್ಟರ ರಮಣ ಉತ್ತಮಚಂದ ಶಹಾ ಅಂತಾ ಇದ್ದು, ಅದು ಶಾಂತಾಬಾಯಿಯವರ ವೈದ್ಯರು ಆಗಬೇಕು, ಅದರ ಜೊತೆಗೆ ಅವರ ಅಣ್ಣನು ಆಗಬೇಕು. ದಿಃ15.12.2011 ರ ನೋಂದ ಆದಗ ಮೃತ್ಯುಪತ್ರ ಆಂಗ್ಲ ಭಾಷೆಯಲ್ಲಿ ಬರೆದಿರುವುದನ್ನು ಸಾಕ್ಷಿ ನೋಡಿದ್ದಾರೆ. ರಾಜೇಶ ಬಾಲಚಂದ್ರ ಶಹಾ ಎನ್ನುವ ಹೆಸರಿನ ಇನ್ನೊಂದು ಲಕೋಟೆ ಇದ್ದು ಅವರು ನನ್ನ ಸ್ವಂತ ಹಿರಿಯ ಅಣ್ಣ ಅಂತಾ ಹೇಳುತ್ತಾರೆ. ಅದರ ಜೊತೆಗೆ ಒಂದು ಮೃತ್ಯುಪತ್ರ ಇದೆ. ರಾಜೇಂದ್ರ ಚುನಿಲಾಲ ಶಹಾ ಎನ್ನುವ ಹೆಸರಿನ ಇನ್ನೊಂದು ಲಕೋಟೆ ಇದ್ದು ಅದರ ಜೊತೆಗೆ ಇನ್ನೊಂದು ಮೃತ್ಯುಪತ್ರ ಇದ್ದು ಅದು ಏನು ಎಂದು ಸಾಕ್ಷಿ ನಿಖರವಾಗಿ ಹೇಳಲು ಆಗುವುದಿಲ್ಲ ಅಂತಾ ಹೇಳುತ್ತಾರೆ. ಕಾರ್ಪೋರೇಶನ ಬ್ಯಾಂಕಿನಲ್ಲಿ ನ್ಯಾಯಾಲಯದಲ್ಲಿ ನಿಯೋಗಿ ಶ್ರೀ.ಡಿ.ಟಿ.ಬಿ ವಕೀಲರು ಮಾಡಿ

ಪಂಚಾನಾಮೆ ಇದೆ. ಸದರಿ ಲಕೋಟೆ ಮತ್ತು ವೈದ್ಯರ ಪ್ರಮಾಣ ಪತ್ರದ ಪ್ರತಿ ಮತ್ತು ಮೃತ್ಯುಪತ್ರದ ಪ್ರತಿಗಳನ್ನು ನಿಡಿ-1 ರಿಂದ ನಿಡಿ-3 ಎಂದು ಗುರುತಿಸಲಾಯಿತು. ಅದು ಡಾಕ್ಟರ ರಮನ್ ಉತ್ತಮಚಂದ ಶಹಾ ಅವರ ಹೆಸರಿರುವ ಲಕೋಟೆ, ಅದೇ ರೀತಿ ರಾಜೇಂದ್ರ ಬಾಲಚಂದ್ರ ಶಹಾ ಇವರ ಹೆಸರಿನಲ್ಲಿರುವ ಲಕೋಟೆ, ಪ್ರಮಾಣ ಪ್ರತ್ರದ ಪ್ರತಿ ಮತ್ತು ಮೃತ್ಯುಪತ್ರದ ಪ್ರತಿಯನ್ನು ನಿಡಿ-4 ರಿಂದ ನಿಡಿ-6 ಅಂತಾ ಗುರುತಿಸಲಾಯಿತು. ಪ್ರತಿವಾದಿ-1 ರವರಿಗೆ ಕಳುಹಿಸಿದ ಲಕೋಟೆ, ಪ್ರಮಾಣ ಪ್ರತ್ರದ ಪ್ರತಿ ಮತ್ತು ಮೃತ್ಯುಪತ್ರದ ಪ್ರತಿಯನ್ನು ನಿಡಿ-7 ರಿಂದ ನಿಡಿ-9 ಅಂತಾ ಗುರುತಿಸಲಾಯಿತು. ನ್ಯಾಯಾಲಯದ ನಿಯೋಗಿಗೆ ಕಳುಹಿಸಿದ ಪತ್ರದ ಪ್ರತಿಯನ್ನು ನಿಡಿ-10 ಎಂದು ಗುರುತಿಸಲಾಯಿತು. ಸಾಕ್ಷಿ ತಾವು ಹಾಜರಪಡಿಸಿದ ಮೃತ್ಯುಪತ್ರವನ್ನು ಮತ್ತು ಈಗ ಲಕೋಟೆಯಲ್ಲಿರುವ 3 ಮೃತ್ಯುಪತ್ರದ ಪ್ರತಿಗಳನ್ನು ನೋಡಿ ಅದರಲ್ಲಿರುವ ವಕ್ಕಣೆಗಳನ್ನು ಒಂದೇ ಎಂದು ಹೇಳುತ್ತಾರೆ. ನಾನು ಮತ್ತು 1 ನೇ ಪ್ರತಿವಾದಿ ಪೋನ ಮೂಲಕ ಮಾತನಾಡಿ ಒಟ್ಟಿಗೆ ಹೋಗಿ ಬ್ಯಾಂಕಿನಲ್ಲಿರುವ ಲಾಕರ್ ಆಪರೇಟ್ ಮಾಡುವುದಾಗಿ ಮಾತನಾಡಿದ್ದು ಇತ್ತು. ನಾನು ಬ್ಯಾಂಕಿಗೆ ಹೋದ 2 ದಿನಗಳ ಮುಂಚೆ 1 ನೇ ಪ್ರತಿವಾದಿ ಬ್ಯಾಂಕಿಗೆ ಲಾಕರ್ ತೆಗೆಯುವ ಸಲುವಾಗಿ ಬಂದಿದ್ದರು ಅಂತಾ ಹೇಳುತ್ತಾರೆ. ಮೃತ್ಯುಪತ್ರದಲ್ಲಿ ಸಾಕ್ಷಿಯಾದ ಸುಜಿತ ಅನ್ನುವವರು ಕೂಡಾ ನಾನು ಹೋದ 2 ದಿನಗಳ ಮುಂಚಿತವಾಗಿ 1 ನೇ ಪ್ರತಿವಾದಿ ಬ್ಯಾಂಕಿಗೆ ಹೋದ ವಿಷಯ ತಿಳಿಸಿದರು. 1 ನೇ ಪ್ರತಿವಾದಿ ನಾನು ತಿಳಿದುಕೊಂಡಂತೆ ನಾನು ಬ್ಯಾಂಕಿಗೆ ಹೋದ 2 ದಿನಗಳ ಮುಂಚಿತವಾಗಿ ಅವರು ಹೋಗುವಾಗ ನನಗೆ ವಿಷಯ ತಿಳಿಸಿಲ್ಲ. ನಾನು ಬ್ಯಾಂಕಿಗೆ ಹೋಗುವಾಗ ರಾಜೇಂದ್ರ ಇವರಿಗೆ ವಿಷಿಯ ತಿಳಿಸಿಲ್ಲ. 1 ನೇ ಪ್ರತಿವಾದಿ ನನ್ನನ್ನು ಸಹ ಕರೆದುಕೊಂಡು ಸಹ ಕರೆದುಕೊಂಡು ಬರಬೇಕಾಗುತ್ತದೆ ಅಂತಾ ಬ್ಯಾಂಕಿನವರು ಹೇಳಿಲ್ಲ. ನಾನು ಹೋದಾಗಲೂ ಬ್ಯಾಂಕಿನ ಅಧಿಕಾರಿಗಳು 1 ನೇ ಪ್ರತಿವಾದಿ ಲಾಕರ್ ತೆಗೆಯುವ ಕಾಲಕ್ಕೆ ಬರಬೇಕಾಗುತ್ತದೆ ಅಂತಾ ತಿಳಿಸಿಲ್ಲ.

5. ಶಾಂತಾಬಾಯಿ ಅವರ ತವರು ಮನೆ ಇಸ್ಲಾಂಪೂರ ಇರಬಹುದು. ಶಾಂತಾಬಾಯಿಯವರ ತಂದೆಯ ಹೆಸರು ರತನಚಂದ ಇರಬಹುದು. ಸಾಕ್ಷಿಗೆ ಪುನಃ ಹೇಳುವುದೇನೆಂದರೆ ಉತ್ತಮಚಂದ ಇರಬಹುದು ಅಂತಾ ಹೇಳುತ್ತಾರೆ. ಶಾಂತಾಬಾಯಿಯವರ ತಾಯಿಯ ಹೆಸರು ಗೊತ್ತಿಲ್ಲ. ಸದರಿ ಶಾಂತಾಬಾಯಿಯವರ ತಂದೆ-ತಾಯಿಗೆ ರಮಣ ಅಂತಾ ಮಗ ಇದ್ದ ಬಗ್ಗೆ ಗೊತ್ತಿದೆ, ಇನ್ನೂ ಎಷ್ಟು ಮಂದಿ ಅಂತಾ ಗೊತ್ತಿಲ್ಲ. ಶಾಂತಾಬಾಯಿಯವರ ತಂದೆ-ತಾಯಿಗೆ 5 ಜನ ಹೆಣ್ಣುಮಕ್ಕಳು ಮತ್ತು 4 ಜನ ಗಂಡು ಮಕ್ಕಳು ಇದ್ದ ಬಗ್ಗೆ ಗೊತ್ತಿಲ್ಲ. ಇಷ್ಟು ದಿನಗಳವರೆಗೂ ಶಾಂತಾಬಾಯಿಯವರನ್ನು ಹೊರತುಪಡಿಸಿ ಡಾಕ್ಟರ ರಮನ್ ಮಾತ್ರ ನೋಡಿದ್ದೇನೆ. ಶಾಂತಾಬಾಯಿಯವರು ಜೀವಂತ ಇರುವಾಗ ನಾನು ಸಾಕಷ್ಟು ಸಲ ಬಂದಿದ್ದೆ. ಆದರೆ ಎಷ್ಟು ಸಲ ಅಂತಾ ಹೇಳಲು ಆಗುವುದಿಲ್ಲ. ಚಿಕ್ಕವನಿದ್ದಾಗಿನಿಂದಲೂ ಬಂದೆನು. ನಾನು ಶಾಂತಾಬಾಯಿಯವರ ತವರುಮನೆ ಇಸ್ಲಾಂಪೂರಕ್ಕೆ ಹೋಗುವ ಅವಶ್ಯಕತೆ ಬಂದಿರಲಿಲ್ಲ. ಅದಕ್ಕಾಗಿ ನಾನು ಹೋಗಿಲ್ಲ. ನಮ್ಮ ತಂದೆ 1 ನೇ ವಾದಿಗೂ ಸಹ ಶಾಂತಾಬಾಯಿಯವರ ತಂದೆ-ತಾಯಿಗೆ ಎಷ್ಟು ಮಂದಿ ಮಕ್ಕಳು ಅಂತಾ ಗೊತ್ತಿಲ್ಲ, ಡಾಕ್ಟರ ರಮಣ್ ಮಾತ್ರ ಗೊತ್ತಿರಬಹುದು. ರಮಣ್ ಮಾತ್ರ ಬದುಕಿದ್ದಾರೆ. ಡಾಕ್ಟರ ರಮಣ್ ಇವರ ಎಷ್ಟು ಮಂದಿ ಸಹೋದರರು ಅಂತಾ ಕೇಳಿ ತಿಳಿದುಕೊಂಡಿಲ್ಲ. ಶಾಂತಾಬಾಯಿಯವರ ಮರಣಾನಂತರ ನಮ್ಮ ತಂದೆಯ ಹೆಸರು ಉತಾರೆಯಲ್ಲಿ ಬಂದಿದ್ದು ಯಾವ ಆಧಾರದಲ್ಲಿ ಎಂದರೆ ಸಾಕ್ಷಿಯು ಕಾನೂನು ರೀತಿಯ ಎರಡನೇ ದರ್ಜೆಯವರಾದ್ದರಿಂದ ಅವರ ಹೆಸರು ಬಂದಿದೆ ಎಂದು ಹೇಳುತ್ತಾರೆ. ನಮ್ಮ ತಂದೆ ಜೀವಂತ ಇದ್ದ ಒಬ್ಬರೇ ಎರಡನೇ ದರ್ಜೆಯ ವಾರಸುದಾರರಾಗಿದ್ದರಿಂದ ಅವರ ಹೆಸರು ನಮೂದು ಆಗಿದೆ ಅಂತಾ ಹೇಳುತ್ತಾರೆ. ನಮ್ಮ ತಂದೆ ವಾರಸುದಾರರು ಅಂತಾ ಅರ್ಜಿ ಕೊಡುವ ಕಾಲಕ್ಕೆ ಮಾಣಿಕಚಂದರವರ ಹೆಣ್ಣುಮಕ್ಕಳು, ರೂಪಚಂದರವರ ಸೊಸೆ ಸಹ ಜೀವಂತ ಇದ್ದರು ಎಂದರೆ ಸರಿ. 2013 ರಲ್ಲಿ ಅರ್ಜಿಯನ್ನು ಸಿಟಿ ಸರ್ವೆಗೆ ಕೊಟ್ಟಿದ್ದ ಎಂದರೆ ಇರಬಹುದು. ಸ್ವತ್ತು ಸಿಟಿ ಮುನಿಸಿಪಲ್ ಕಾರ್ಪೊರೇಶನ ಕಚೇರಿಯ ಮುಂಭಾಗದಲ್ಲಿ, ಜೈನ ಮಂದಿರ ಹೊಂದಿ ಸ್ವತ್ತು ಇದೆ ಎಂದರೆ ಸರಿ. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಮತ್ತು

ಈವಾಗ ಎಷ್ಟು ಇದೆ ಅಂತಾ ಗೊತ್ತಿಲ್ಲ. ದಾವಾ ಹಾಕುವ ಕಾಲಕ್ಕೆ 3-4 ಕೋಟಿ ಸ್ವತ್ತು ಬೆಲೆ ಬಾಳುತಿತ್ತು ಮತ್ತು ಈಗ 5 ರಿಂದ 6 ಕೋಟಿ ಆಗಿದೆ ಎಂದರೆ ಸರಿಯಲ್ಲ.

6. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಷಯಗಳನ್ನು ದಾಖಲೆಗಳನ್ನು ಆಧಾರಸಿ ಪ್ರಮಾಣ ಪತ್ರ ತಯಾರಿಸಲಾಗಿದೆ. ಪ್ರಮಾಣ ಪತ್ರದಲ್ಲಿ ಏನು ಮಾಹಿತಿ ಇದೆ ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮೃತ್ಯುಪತ್ರದ ಪ್ರತಿ ನನಗೆ ಯಾವ ದಿನಾಂಕದಂದು ಪೋಸ್ಟ ಮೂಲಕ ಬಂತು ಅಂತಾ ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ಶಾಂತಾಬಾಯಿ ಮೃತರಾಗುವ ಪೂರ್ವದಲ್ಲಿ ಬಂದಿತ್ತು ಎಂದರೆ ನೆನಪಿಲ್ಲ. ದಿ:05.07.2018 ರಂದು ಹಾಜರಪಡಿಸಿದ ದಾಖಲೆಗಳ ಪೈಕಿ ನೋಂದಾಯಿತ ಅಂಚೆ ಮೂಲಕ ಬಂದ ಲಕೋಟೆಯನ್ನು ಸಾಕ್ಷಿಗೆ ತೋರಿಸಿದ್ದು ಅದು ಯಾವಾಗ ಪಡೆದಿದ್ದೇನೆ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಅಂತಾ ಹೇಳುತ್ತಾರೆ. ಅದನ್ನು ದಿ:12.01.2012 ರಂದು ಪಡೆದಿದ್ದೇನೆ ಎಂದರೆ ಇರಬಹುದು. ಆ ರೀತಿ ಬಂದ ದಾಖಲೆಗಳನ್ನು ನಾನು ಮತ್ತು ನಮ್ಮ ತಂದೆ ಓದಿದ್ದೇವೆ. ಸದರಿ ಲಕೋಟೆಯನ್ನು ನಿಡಿ-11 ಎಂದು ಗುರುತಿಸಲಾಯಿತು. ನಿಡಿ-11 ರಲ್ಲಿ ದಾಖಲೆಗಳು ಬಂದ ನಂತರ ಓದಿ, ತಿಳಿದು ಶಾಂತಾಬಾಯಿರವರನ್ನು ನಮ್ಮ ತಂದೆ ಸಂಪರ್ಕಿಸಿದ ಬಗ್ಗೆ ನನಗೆ ನೆನಪಿಲ್ಲ. ನಾನು ಸಂಪರ್ಕಿಸುವ ಪ್ರಯತ್ನ ಮಾಡಿದ ಬಗ್ಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಭಾಗದಲ್ಲಿ ಪ್ಯಾರಾ ನಂ.8 ರಿಂದ 11 ರಲ್ಲಿನ ವಿಷಯಗಳು ನನ್ನ ವಾದ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ನೆನಪಾದ ನಂತರ ನನ್ನ ಮುಖ್ಯ ವಿಚಾರಣೆಯಲ್ಲಿ ಸೇರಿಸಿದ್ದೇನೆ ಎಂದು ಹೇಳುತ್ತಾರೆ. ಸದರಿ ವಾದ ಪತ್ರವನ್ನು ಪ್ರಮಾಣ ಪತ್ರದಲ್ಲಿನ ಪ್ಯಾರಾಗಣುನವಾಗಿ ತಿದ್ದುಪಡಿ ಮಾಡಲು ಕೇಳಿದ ಅರ್ಜಿ ವಜಾ ಆಗಿದೆ ಎಂದರೆ ಸರಿ. ನಾವು ಈ ದಾವೆಯನ್ನು ಮೃತ್ಯುಪತ್ರವನ್ನು ಆಧರಿಸಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಮೃತ್ಯುಪತ್ರದ ಪ್ರತಿ ಬಂದ ನಂತರ ಓದಿ ತಿಳಿದುಕೊಂಡು ಅದರಲ್ಲಿರುವ ಅಂಶಗಳು ಸರಿಯಾಗಿ ಇರುವ ಕಾರಣ ಅದರ ಬಗ್ಗೆ ಶಾಂತಾಬಾಯಿಯವರ ಬಳಿ ಚರ್ಚೆ ಮಾಡಿಲ್ಲ ಎಂದರೆ ಸಾಕ್ಷಿಯು ಆ ರೀತಿ ಮೃತ್ಯುಪತ್ರ ಮಾಡಿರಲಿಲ್ಲ ಅಂತಾ ಹೇಳುತ್ತಾರೆ.

ಮೃತ್ಯುಪತ್ರದ ಪ್ರತಿ ನಮ್ಮ ತಂದೆಗೆ ಬಂದ ನಂತರ ಆ ವಿಷಯವಾಗಿ ನಮ್ಮ ತಂದೆಯ ಬಳಿ ವಿಚಾರಿಸಿಲ್ಲ. ರಾಜೇಂದ್ರ 1 ನೇ ಪ್ರತಿವಾದಿ ಸಂಬಂಧ ಇಲ್ಲದ ಕಾರಣ ಅವರನ್ನು ಸಂಪರ್ಕಿಸಿಲ್ಲ ಅಂತಾ ಹೇಳುತ್ತಾರೆ. ಅದೇ ರೀತಿ ಮೃತ್ಯುಪತ್ರದ ಸಾಕ್ಷಿಯಾದ ಸುಜೀತ ಶಹಾ ಇವರ ಬಳಿ ಸಹ ನಾನಾಗಲೀ, ನನ್ನ ತಂದೆಯಾಗಲೀ ಸಂಪರ್ಕಿಸಿ ವಿಚಾರಿಸಿಲ್ಲ. ಮೃತ್ಯುಪತ್ರ ತಯಾರು ಮಾಡಿದ ಶ್ರೀ.ಟಿ.ಎಲ್.ಕವಟಕೊಪ್ಪ ಇವರನ್ನು ನಾನು ಸಂಪರ್ಕಿಸಿಲ್ಲ. ಸಾಕ್ಷಿ ಅದು ಖೊಟ್ಟಿಯಾಗಿರುವುದರಿಂದ ಅದನ್ನು ಪಶ್ನಿಸಲು ಹೋಗಿಲ್ಲ. ದಾವೆಯನ್ನು ಹಾಕುವುದನ್ನು ಹೊರತುಪಡಿಸಿ ಮೃತ್ಯುಪತ್ರದ ಪ್ರತಿ ಬಂದ ನಂತರ ಇಲ್ಲಿಯವರೆಗೂ ಕಾನೂನು ರೀತಿ ಕ್ರಮ ಕೈಗೊಂಡಿಲ್ಲ.

ಶ್ರೀ.ಡಿ.ಐ.ಕೆ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ